ಕರ್ನಾಟಕ ಸರ್ಕಾರ

# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ/ಕಂ/ಅಪೀಲು/50/16-17 ದಿನಾಂಕ : 30/08/2016.

ಉಪಸ್ಥಿತರು: **ಲೋಕೇಶ್ ಪಿ. ಎನ್,** ಕ. ಆ. ಸೇ.

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1. ಶ್ರೀ ಸಣ್ಣ ದೇವಪ್ಪ ತಂದೆ ಬಂಕದ ಮಲ್ಯಪ್ಪ<br>2. ಶ್ರೀ ಬಿ.ದೂಡ್ಡ ದೇವಪ್ಪ ತಂದೆ ಬಂಕದ ಮಲ್ಯಪ್ಪ<br>3. ಶ್ರೀ ಬಿ. ಮುದಿಯಪ್ಪ ತಂದೆ ಬಂಕದ ಮಲ್ಯಪ್ಪ<br>ಸಾ\|\| ವಡ್ಡು ಗ್ರಾಮ, ತಾ\|\| ಸಂಡೂರು ಜಿ\|\| ಬಳ್ಳಾರಿ<br>(ಶ್ರೀ ಯು.ತಿಮ್ಮಪ್ಪ ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಸಂಡೂರು<br>2. ಕಂದಾಯ ನೀರಿಕ್ಷಕರು, ತೋರಣಗಲ್ಲು<br>3. ಗ್ರಾಮಲೆಕ್ಕಾಧಿಕಾರಿಗಳು, ಎಸ್. ಬಸಾಪುರ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸಂ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಂಡೂರು | ಎಸ್. ಬಸಾಪುರ | 79/1<br>79/1<br>79/1 | 0-51<br>0-51<br>0-51 | |

ವಾದಿಯು ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿ ಕಂದಾಯ ನೀರಿಕ್ಷಕರು, ತೋರಣಗಲ್ಲು ಇವರ ಎಂ.ಆರ್.ನಂ.57/2008-09 ದಿನಾಂಕ:19-03-2009ರ ಆದೇಶದಂತೆ ಪಹಣಿಯಲ್ಲಿ ವಾದಿಯ ತಂದೆಯ ಹೆಸರನ್ನು ಬಂಕದ ರಾಮಯ್ಯ ಬದಲಾಗಿ **"ಬಂಕದ ಮಲ್ಯಪ್ಪ"** ಎಂದು ನಮೂದಿಸಲು ಕೋರಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ 30/08/2016 ರಂದು ಪ್ರಕರಣದ ವಿಚಾರಣೆಯನ್ನು ನಡೆಸಲಾಯಿತು.

ವಾದಿಯು ತಮ್ಮ ಮೇಲ್ಮನವಿಯಲ್ಲಿ ಕಂದಾಯ ನಿರೀಕ್ಷಕರು, ತೋರಣಗಲ್ಲು ಎಂ.ಆರ್.ನಂ.57/2008-09 ದಿನಾಂಕ:19-03-2009ರ ಆದೇಶದಂತೆ ಸಂಡೂರು ತಾಲ್ಲೂಕು ಎಸ್. ಬಸಾಪುರ ಸ. ನಂ. 79/1, 79/1,79/1 ಕ್ರಮವಾಗಿ ವಿಸ್ತೀರ್ಣ 0-51,0-51,0-51, ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿ 2 ರವರು ಹಕ್ಕು ಬದಲಾವಣೆ ಆದೇಶ ಮಾಡಿದ್ದು, ಸದರಿ ಆದೇಶದಂತೆ ಪಹಣಿಗಳಲ್ಲಿ ವಾದಿಯ ತಂದೆಯ ಹೆಸರನ್ನು **"ಬಂಕದ ಮಲ್ಯಪ್ಪ"** ಎಂದು ನಮೂದಿಸುವ ಬದಲಾಗಿ ಬಂಕದ ರಾಮಯ್ಯ ಎಂದು ನಮೂದು ಮಾಡಿರುವುದನ್ನು ಸರಿಪಡಿಸಿ ಬಂಕದ ಮಲ್ಯಪ್ಪ ಎಂದು ನಮೂದಿಸಲು ಕೋರಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಲಾಯಿತು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು, ಸಂಡೂರು ಇವರಿಗೆ ಸೂಚಿಸುವ ಈ ಕೆಳಕಂಡ ಆದೇಶ.

# ಆದೇಶ

ವಾದಿಯ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ತಹಶೀಲ್ದಾರರು, ಸಂಡೂರು ಇವರು ಸಂಡೂರು ತಾಲ್ಲೂಕು ಎಸ್. ಬಸಾಪುರ ಸ. ನಂ. 79/1, 79/1,79/1 ಕ್ರಮವಾಗಿ ವಿಸ್ತೀರ್ಣ 0-51,0-51,0-51, ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು ಈ ಪ್ರಾಧಿಕಾರದ ಅನುಮೋದನೆ ಪಡೆಯಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 30/08/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

(signature)
ಸಹಾಯಕ ಆಯುಕ್ತರು,
ಬಳ್ಳಾರಿ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ತಹಶೀಲ್ದಾರರು, ಸಂಡೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.

Copy Received by
(signature)
Advocate
for petitioner
Date 20/9/16